## ಶಿವ ಪಾರ್ವತಿಯ ಪಿಕ್ನಿಕ್




ಪ್ರೇಮ ಪ್ರಣಯ, ಸಸ್ಪೆನ್ಸ್ ಥ್ರಿಲ್ಲರ್, ಪೌರಾಣಿಕ ಎಳೆಯನ್ನೊಳಗೊಂಡಿರುವ ಸಾಮಾಜಿಕ ಕಥನ – ಹೀಗೆ ವೈರುಧ್ಯಗಳನ್ನೊಳಗೊಂಡ ಹಲವು ಸಂಗತಿಗಳನ್ನು ತಮ್ಮ ಸಿನಿಮಾ ಬಣ್ಣಿಸಲು ನಿರ್ದೇಶಕ ಸುರೇಶ್ ಬಳಸಿಕೊಳ್ಳುತ್ತಾರೆ. ಅವರ ನಿರ್ದೇಶನದ 'ಶಿವು ಪಾರು' ಜೂನ್ 8ರಂದು ತೆರೆ ಕಾಣುತ್ತಿದೆ.

ಚಿತ್ರದ ಕಥೆಯಷ್ಟೇ ಸುರೇಶ್ ಅವರ ಹಿನ್ನೆಲೆಯೂ ಆಸಕ್ತಿ ಹುಟ್ಟಿಸುವಂತಿದೆ. ಅವರು ಬರೀ ಸುರೇಶ್ ಅಲ್ಲ, ಅಮೆರಿಕ ಸುರೇಶ್. ಕಳೆದ ಎರಡು ದಶಕಗಳಿಂದ ಅಮೆರಿಕದಲ್ಲಿ ನೆಲೆಸಿರುವ ಅವರು, ವೃತ್ತಿಯಿಂದ ಸಾಫ್ಟ್‌ವೇರಿಗರಾದರೂ ಸಾಕಷ್ಟು ಸಿನಿಮಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿಗಾಗಿ ಕಥೆಗಳನ್ನು ರಚಿಸಿದ್ದಾರಂತೆ. ಈ ಸಿನಿಮಾ ಸೆಳೆತದ ಫಲವೇ ಶಿವು ಪಾರು. ಚಿತ್ರದ ನಿರ್ಮಾಣ, ನಿರ್ದೇಶನದ ಜೊತೆಗೆ ಅವರು ಮುಖ್ಯಪಾತ್ರದಲ್ಲಿ ಕೂಡ ನಟಿಸಿದ್ದಾರೆ.

ಶಿವ–ಪಾರ್ವತಿಯವರ ಭೂಲೋಕದ ಕಥೆ ಚಿತ್ರದಲ್ಲಿ ಇದೆಯಂತೆ. ರೋಮಿಯೊ ಜೂಲಿಯೆಟ್ ಪ್ರೇಮಕಥೆಗಿಂತಲೂ ನಮ್ಮ ಕಥೆ ಯಾವುದರಲ್ಲೂ ಕಡಿಮೆ ಇಲ್ಲ ಎನ್ನುವ ವಿಶ್ವಾಸ ಅವರದು. ಸಾಯುವ ಮುನ್ನ ಒಮ್ಮೆ ನೋಡಲೇಬೇಕಾದ ಸಿನಿಮಾ ಎನ್ನುವುದು ತಮ್ಮ ಚಿತ್ರದ ಕುರಿತು ಅವರ ಆತ್ಮವಿಶ್ವಾಸದ ಮಾತು.

ಕಿರುತೆರೆಯ 'ಪ್ಯಾಟೆ ಹುಡ್ಗೀರ್ ಹಳ್ಳಿಗೆ ಬಂದ್ರು' ರಿಯಾಲಿಟಿ ಷೋ ಕೂಡ ಸಿನಿಮಾದಲ್ಲಿ ಬಂದುಹೋಗುತ್ತದಂತೆ. ಸುರೇಶ್ ಅವರೇ ಚಿತ್ರದ ಗೀತೆಗಳನ್ನು ರಚಿಸಿ, ಸ್ವರಸಂಯೋಜನೆ ಮಾಡಿದ್ದಾರೆ. ಹಿನ್ನೆಲೆ ಸಂಗೀತ ವಿನೀತ್ ರಾಜ್ ಮೆನನ್ ಅವರದು. ತಾರಾಗಣದಲ್ಲಿ ಸುರೇಶ್, ದಿಶಾ ಪೂವಯ್ಯ, ಭವ್ಯಾ, ಹೊನ್ನವಳ್ಳಿ ಕೃಷ್ಣ, ರಮೇಶ್ ಭಟ್, ಚಿತ್ರಾ ಶೆಣೈ ಮುಂತಾದವರಿದ್ದಾರೆ.



## 'ಕೈ'ಗುಣದ ಕ್ಯಾರಿಕೇಚರ್!

ಮನಸ್ಸಿನ ಮೇಲೆ ನಿಯಂತ್ರಣ ತಪ್ಪಿದರೆ ಏನಾಗುತ್ತದೆ ಎನ್ನುವುದನ್ನು ಹೇಳುವ ಕಥೆಗಳ ನೂರಾರು ಚಿತ್ರಗಳು ತೆರೆಕಂಡಿವೆ. ಆದರೆ, ಯುವ ನಿರ್ದೇಶಕ ಅರ್ಜುನ್‌ಕುಮಾರ್ ರೂಪಿಸುತ್ತಿರುವುದು ಕೈ ಮೇಲೆ ನಿಯಂತ್ರಣ ಕಳೆದುಕೊಂಡರೆ ಏನಾಗುತ್ತದೆ ಎನ್ನುವುದನ್ನು.

ನರ ದೌರ್ಬಲ್ಯದಿಂದಾಗಿ ತನ್ನ ಕೈ ಮೇಲೆ ನಿಯಂತ್ರಣ ಕಳೆದುಕೊಂಡ ವ್ಯಂಗ್ಯಚಿತ್ರಕಾರನೊಬ್ಬನ ಕಥೆ 'ಸಂಕಷ್ಟಕರ ಗಣಪತಿ' ಚಿತ್ರದ್ದು. ಎಲ್ಲರಿಗೂ ಸಂಕಷ್ಟಹರ ಗಣೇಶ ಗೊತ್ತು. ಆದರೆ ಅರ್ಜುನ್ ಹೇಳುತ್ತಿರುವುದು 'ಸಂಕಷ್ಟಕರ'ನ ಬಗ್ಗೆ. ಈ 'ಕರ' ವಿಶೇಷಣ ಕಥೆಯ ಜೊತೆಗೆ ಶೀರ್ಷಿಕೆಯಲ್ಲೂ ಇರಲಿ ಎನ್ನುವುದು ಅವರ ಉದ್ದೇಶ. ಅರ್ಜುನ್ ಅವರಿಗಿದು ನಿರ್ದೇಶಕರಾಗಿ ಚೊಚ್ಚಲ ಸಾಹಸ. ಸಿನಿಮಾಕ್ಕೆ ಪೂರ್ವಭಾವಿಯಾಗಿ ಕಿರುಚಿತ್ರಗಳನ್ನು ರೂಪಿಸಿದ ಅನುಭವ ಅವರಿಗಿದೆ. 'ಪನ್ನಂಡಿ ಕ್ರಾಸ್' ಅವರಿಗೆ ಹೆಸರು ತಂದುಕೊಟ್ಟ ಕಿರುಚಿತ್ರ.

ಅದ್ದೂರಿತನಕ್ಕಿಂತಲೂ ಹೆಚ್ಚಾಗಿ ಸೂಕ್ಷ್ಮ ಸಂಗತಿಗಳತ್ತ ಗಮನಹರಿಸಿದ್ದೇನೆ ಎನ್ನುವ ನಿರ್ದೇಶಕರು, ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣ ನಡೆಸಿದ್ದಾರೆ. ರಿತ್ವಿಕ್ ಮುರುಳೀಧರ್ ಸಂಗೀತ ಸಂಯೋಜನೆಯ ಗೀತೆಗಳ ಧ್ವನಿಮುದ್ರಿಕೆ ಸದ್ಯದಲ್ಲೇ ಬಿಡುಗಡೆಯಾಗಲಿದೆ.

ಲಿಖಿತ್ ಶೆಟ್ಟಿ ಹಾಗೂ ಶ್ರುತಿ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಇಬ್ಬರಿಗೂ ನಿರ್ದೇಶಕರು ಹೆಣೆದ ಕಥೆಯ ಬಗ್ಗೆ ಖುಷಿಯಿದೆ, ನಿರೀಕ್ಷೆಯಿದೆ. ಅಚ್ಯುತ್ ಕುಮಾರ್ ತಾರಾಗಣದಲ್ಲಿರುವ ಮತ್ತೊಬ್ಬ ಪ್ರಮುಖ ಕಲಾವಿದ.